# <u>ಅಣುವಾಗಬಲ್ಲ ಮಹತ್ತಾಗಬಲ್ಲ</u>

ಶ್ರೀ ಪುರಂದರ ದಾಸರು ದೇವರ ಅಚಿಂತ್ಯ ಅದ್ಭುತ ಶಕ್ತಿಯನ್ನು ಈ ಹಾಡಿನಲ್ಲಿ ಹೇಳಿದ್ದಾರೆ.

ದೇವರು ಅಣುವಾಗಬಲ್ಲ – ಅವನು ಬ್ಯಾಕ್ಟಿರಿಯಾದಂತಹ ಜೀವಿಗಳಲ್ಲಿ ಇದ್ದು ಅದರ ಜೀವನವನ್ನು ನಡಿಸುತ್ತಾನೆ.

ಮಹತ್ತಾಗಿ ಇಡೀ ಬ್ರಹ್ಮಾಂಡವನ್ನೇ ಧರಿಸುತ್ತಾನೆ, ನಡಿಸುತ್ತಾನೆ.
ಅನಂತಗುಣ ಪರಿಪೂರ್ಣನಾದ ಹರಿ ಕೆಲವೊಮ್ಮೆ ನಿರ್ಗುಣನೆನಿಸುತ್ತಾನೆ.

ಕೆಲವೊಮ್ಮೆ ಪ್ರತ್ಯಕ್ಷನಾಗಿ ಕರುಣಿಸಬಲ್ಲ. ಆದರೆ ಅದು ಅಪರೋಕ್ಷ ಜ್ಞಾನಿಗಳಿಗೆ ಮಾತ್ರ ಇರುವ ಭಾಗ್ಯ. ಉಳಿದವರಿಗೆ ಅವ್ಯಕ್ತವಾಗಿಯೇ ಇರುತ್ತಾನೆ. ಹಾಗೇ ಅನುಗ್ರಹಿಸುತ್ತಾನೆ.

ಅವನೇ ಸ್ವಗತ, ಬೇರೆಯವರ ಹಂಗಿಲ್ಲ, ಅವನಿಗೆ ಬೇರೆಯವರ ಆಶೆಯಿಲ್ಲ... ಸರ್ವತಂತ್ರ ಸ್ವತಂತ್ರ ಎಂದು ದಾಸರು ದೇವರನ್ನು ಕೊಂಡಾಡಿದ್ದಾರೆ.

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 667.
2. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru, page No. 173.
3. **Note:** In Ref. 2, it is given as Suladi stanza 1. But in Ref. 1 it is given as Ugabhoga. Small variation is there in wordings in suladi.
4. **Note:** Lyrics given without highlights are as per Ref. 1. This is checked, corrected and approved by Dr. Vyasanakere Prabhanjanachar.
5. **Note:** These lyrics are followed by the singer.

ಅಣುವಾಗಬಲ್ಲ ಮಹತ್ತಾಗಬಲ್ಲ
ಅಣು ಮಹತ್ತೆರಡೊಂದಾಗಬಲ್ಲ ॥ ಪ ॥

ರೂಪನಾಗಬಲ್ಲ ಅರೂಪನಾಗಬಲ್ಲ
ರೂಪ ಅರೂಪವೆರಡೊಂದಾಗಬಲ್ಲ  ॥ 1 ॥

ಸಗುಣನಾಗಬಲ್ಲ ನಿರ್ಗುಣನಾಗಬಲ್ಲ
ಸಗುಣ ನಿರ್ಗುಣ ಎರಡೊಂದಾಗಬಲ್ಲ  ॥ 2 ॥

ವ್ಯಕ್ತನಾಗಬಲ್ಲ ಅವ್ಯಕ್ತನಾಗಬಲ್ಲ
ವ್ಯಕ್ತ ಅವ್ಯಕ್ತ ಎರಡೊಂದಾಗಬಲ್ಲ  ॥ 3 ॥

ಘಟಿತಾಘಟಿತ ಅಚಿಂತ್ಯಾದುಭುತ
ಸ್ವಗತ ಸ್ವರೂಪ ನಮ್ಮ ಪುರಂದರ ವಿಠಲ  ॥ 4 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಅರೂಪ** = ರೂಪವಿಲ್ಲದಿರುವುದು

**ವ್ಯಕ್ತ** = ಪ್ರಕಟ

**ನಿರ್ಗುಣ** = ಗುಣ ರಹಿತ

**ಸ್ವಗತ ಭೇದ ವಿವರ್ಜಿತ** = ಮೂಲ ರೂಪ ಮತ್ತು ಅವತಾರಗಳಲ್ಲಿ ಭೇದವಿಲ್ಲದವನು

**Classification:** Ugabhoga
**Ankita:** purandara vittala
**Location:** NA
**Category:** aNu rUpa, mahatmya jnana
**Sub-Category:** aNu, rUpa, guNa
**Pravachana:** NA
**Explanation:** NA